


ನಿವೇದಿಸಿಕೊಳ್ಳುತ್ತಿದ್ದ. ಅವಳು ತಾರಕವನ್ನು ಮತ್ತೂ ಮೇಲೇರಿಸುವಳು! ನನ್ನನ್ನು ನೋಡಿದ್ದೇ, ಪೆಂಟಮ್ಮ ಸ್ತಬ್ಧಳಾದಳು. 'ಒಡೇರ, ನೀವೇ ಇಚಾರ್ಸಿಕೊಳ್ಳಿ...' ಎಂದು ಮನೆಯೊಳ ಹೊಕ್ಕಳು.

ಶ್ರವಣ್ ನೈನಿತಾಲ್‌ನವನಂತೆ. ಬೆಂಗಳೂರಿನಲ್ಲಿ ಯಾವುದೋ 'ಸಾಫ್ಟ್‌ವೇರ್'ನಲ್ಲಿ ಕೆಲಸಕ್ಕಿದ್ದಾನೆ. ಚೆನ್ನನಿಸುವ ಆಳು. ಫೋಟಾಗ್ರಫಿಯಲ್ಲಿ ಇನ್ನಿಲ್ಲದ ಆಸ್ಥೆಯಂತೆ. ತನ್ನನ್ನಲ್ಲದೆ ಆಚೀಚಿನ ಯಾತಕ್ಕೂ ಎಡೆಗೊಡದ ಕೆಲಸದಿಂದ ಬೇಸತ್ತು, ಒಂದು ತಿಂಗಳ ಮಟ್ಟಿಗೆ ರಜೆ ತಕ್ಕೊಂಡು, ಕೊಪ್ಪದಲ್ಲೊಂದು ಲಾಡ್ಜಿನಲ್ಲಿ ವಾಸ್ತವ್ಯ ಕೈಕೊಂಡು ಜಯಪುರದ ಸುತ್ತಲಿನ ಕಾಡುಮೇಡು ಸುತ್ತಿಕೊಂಡು, ಬೈಕಿನಲ್ಲಿ ಅಡ್ಡಾಡಿಕೊಂಡಿದ್ದಾನೆ. ದಟ್ಟ ಕಾನುಗಳ ವನ್ಯವನ್ನೂ, ವನಸ್ಪತಿಯನ್ನೂ, ತನ್ನ ದುಬಾರಿ ಕ್ಯಾಮೆರಾದ ಕಣ್ಣುಗಳೊಳಗೆ ಹೂಡೂಡಿಕೊಂಡು ನೋಡುತ್ತ ಆಡಾಡಿಕೊಂಡಿದ್ದಾನೆ. ಹೀಗಿರುವ ನಡುವೆ, 'ಈಶಾವಾಸ್ಯಂ' ಕಣ್ಣಿಗೆ ಬಿದ್ದಿದೆ. ಕುತೂಹಲದ ಮೇರೆಗೆ, ನೋಡಿಯೇಬಿಡುವಾ ಎಂದು ಒಳಹೊಕ್ಕು, ಪೆಂಟಮ್ಮನ ಬೊಂಬಾಯಿಂತಹ ಬಾಯಿಗೆ ಸಿಕ್ಕಿದ್ದಾನೆ!

'ಕೆನ್ನೈ ಸೀ ವಾಟ್ಸ್ ದಟ್ ಯು ಕ್ಯಾಪ್ಚರ್?' ಎಂದು, ಶ್ರವಣನಿಗೆ 'ಈಶಾವಾಸ್ಯಂ'ನನ್ನು ಕೂಲಂಕಷವಾಗಿ ತೋರಗೊಟ್ಟ ಬಳಿಕ, ಪೆಂಟಮ್ಮ ಮಾಡಿಕೊಟ್ಟ ಗಂಟಲು ಚುರುಗುಡುವ ಕಷಾಯದ ನಡುವೆ ಕೇಳಿದೆ. ಕೈಯಲ್ಲಿದ್ದ ಡಿಜಿಟಲ್ ಕ್ಯಾಮೆರಾವನ್ನು, ನನ್ನ ಕೊರಳು ಬಳಸುವ ಹಾಗೆ ಇಳಿಯಗೊಟ್ಟು, ತೋರತೊಡಗಿದ. 'ಅರ್ರೇ... ಕ್ಯಾ ಕಮಲ್ ಹೇ!!' ಒಂದೆರಡು ಫ್ರೇಮು ನೋಡಿದ್ದೇ ಉದ್ಗರಿಸಿದೆ. 'ಈಶಾವಾಸ್ಯಂ'ಅನ್ನು, ನಾನು ನೋಡಿರದ ಕೋನಗಳಲ್ಲಿ ಸೆರೆಹಿಡಿದಿದ್ದ. ಒಂದೊಂದೂ ಅದ್ಭುತವೆನಿಸಿದವು. 'ಎಲ್ಲಿ? ಕೆನ್ನೈ ಕೀಪ್ ಸಮ್ ಆಫ್ ದೀಸ್?' ಎಂದು ಕೇಳಿದೆ. 'ಪೆನ್‌ಡ್ರೈವ್ ಇದೆಯಾ, ಸರ್?...' ಅಂತಂದ. ಇಬ್ಬರೂ ನನ್ನ ಕಂಪ್ಯೂಟರಿನಲ್ಲಿ ತೊಡಗಿಕೊಂಡು ಅದಿಬದಿ ಕುಳಿತೆವು. ವ್ಹಾರೆವ್ಹಾ... ಅಬ್ಬಾ... ಅಂತೆಲ್ಲ ಉದ್ಗರಿಸುತ್ತ, ಅವನ ಕ್ಲಿಕ್ಕುಗಳನ್ನು ಕಣ್ತುಂಬಿಕೊಂಡೆ. ನಡುವೆ, ನನ್ನನ್ನು ಮಾತುಮಾತಿಗೂ 'ಸರ್' ಎಂದು ಸಂಬೋಧಿಸುತ್ತಿದ್ದವನನ್ನು ತಡೆದು, 'ಯು ನೋ ವಾಟ್? ಎಲ್ಲರೂ ನನ್ನನ್ನು ಈಶ್ ಅಂತ ಕರೀತಾರೆ... ನೀನೂ ಹಾಗೇ ಅನ್ನಬಹುದು' ಅಂತಂದೆ. ಕೊಂಚ ಹಿಂಜರಿದ. 'ಎಲ್ಲಿ? ಕಾಲ್ ಮಿ ಈಶ್...' ಎಂದು ಹೇಳಿ, ಕೇಳಿ, ಒತ್ತಾಯಿಸಿ, ಹಾಗೆ ಕರೆಯಿಸಿಕೊಂಡೆ. 'ಏನು ಗೊತ್ತಾ, ನನ್ನ ಮಗನೂ ನನ್ನನ್ನು ಈಶ್ ಅಂತಲೇ ಕರೆಯೋದು!' ಅಂತಂದೆ. ಕಣ್ಣೆಳಕಿಕೊಂಡು ನೋಡಿದ. 'ಅದು ಸರಿ... ರೂಮಿನಲ್ಲಿ ಒಬ್ಬಾಕೆ ಮಲಗಿಕೊಂಡಿದ್ದಾರಲ್ಲ, ಅವರು ಯಾರು?' ಎಂದು ಮಾತು ಮುಂದುವರೆಸುತ್ತ ಕೇಳಿದ. ಕನಕದುರ್ಗೆಯ ಬಗ್ಗೆ ಮೊಟುಕಾಗಿ ಹೇಳಿದೆ. ಲೊಚ್ಚೆಂದೊಮ್ಮೆ ಬಾಯಿ ಮಿಡಿದು, ಸ್ಸಾರಿ